ದಿಃ 05-08-2017 ರಂದು ಸಾಕ್ಷಿಯನ್ನು ಸತ್ಯ ಪ್ರತಿಜ್ಞೆ ಮೇರೆಗೆ ಬೋಧಿಸಲಾಯಿತು.

ಪಾಟೀ ಸವಾಲುಃ 9 ಮತ್ತು 10 ನೇ ಪ್ರತಿವಾದಿ ಪರ ವಕೀಲರಿಂದಃ

ದಾವಾ ಆಸ್ತಿಯ ಉತಾರನ್ನು ದಾವೆ ಹೂಡುವಾಗ ನೋಡಿದ್ದೇನೆ. 2 ಜಮೀನುಗಳ ಮೇಲೆದಾವೆ ಹೂಡಿದ್ದೇನೆ. ನಿಪಿ 1 ಮತ್ತು 2 ರಲ್ಲಿ ಯಾರ ಹೆಸರುಗಳಿವೆ ಎಂದು ಗೊತ್ತಿಲ್ಲ. ದಾವಾ ಆಸ್ತಿಯ ಚಕ್ಕುಬಂದಿ ಗೊತ್ತಿಲ್ಲ. 1 ನೇ ಪ್ರತಿವಾದಿ ನನ್ನ ಗಂಡ. 1 ನೇ ಪ್ರತಿವಾದಿ ಹಾಕಿದ ತಕರಾರಿನ ಬಗ್ಗೆ ನಮ್ಮ ವಕೀಲರ ಮೂಲಕ ತಿಳಿದುಕೊಂಡಿಲ್ಲ. 1 ರಿಂದ 8 ನೇ ಪ್ರತಿವಾದಿಯರು ಅಣ್ಣ ತಮ್ಮಂದಿರು ಮತ್ತು ಅಕ್ಕ ತಂಗಿಯರು. ಸರ್ವೆ ನಂ. 439/1 8 ಎಕರೆ 20 ಗುಂಟೆ ಯಲ್ಲಿ 1 ನೇ ಪ್ರತಿವಾದಿಗೆ 2 ಎಕರೆ 32 ಗುಂಟೆ ಬಂದಿತ್ತು ಎಂದರೆ ನಿಜ. ಸರ್ವೆ ನಂ. 488/2 5 ಎಕರೆ 20 ಗುಂಟೆ ಯಲ್ಲಿ 1 ನೇ ಪ್ರತಿವಾದಿಗೆ 37 ಗುಂಟೆ ಬಂದಿತ್ತು ಎಂದರೆ ನಿಜ. 1 ನೇ ಪ್ರತಿವಾದಿಗೆ ಬಂದ 2 ಎಕರೆ 32 ಗುಂಟೆ ಯನ್ನು ಕುಟುಂಬದ ಅಡಚಣೆಗಾಗಿ ಮಾರಾಟ ಮಾಡಿದ್ದರೆಂದರೆ ಸಾಕ್ಷಿಯು ಕುಡಿದ ಅಮಲಿನಲ್ಲಿ 1 ನೇ ಪ್ರತಿವಾದಿಯ ಹತ್ತಿರ ಸಹಿ ಮಾಡಿಸಿಕೊಂಡಿದ್ದಾರೆಂದು ಹೇಳುತ್ತಾರೆ. ಈ ವಿಷಯವನ್ನು ನಾನು ದಾವೆಯಲ್ಲಿ ಬರೆಸಿದ್ದೇನೆ. ಕುಡಿದ ಅಮಲಿನಲ್ಲಿ 1 ನೇ ಪ್ರತಿವಾದಿಯ ಹತ್ತಿರ ಸಹಿ ಮಾಡಿಸಿಕೊಂಡಿದ್ದಾರೆಂದು ನನ್ನ ಕೇಸಿಗೆ ಅನುಕೂಲವಾಗಲೆಂದು ಸುಳ್ಳು ಹೇಳುತ್ತೇನೆಂದರೆ ಸರಿಯಲ್ಲ.

2004 ರಲ್ಲಿ 1 ನೇ ಪ್ರತಿವಾದಿಯು ಸರ್ವೆ ನಂ. 439/1 2 ಎಕರೆ 32 ಗುಂಟೆ ಯನ್ನು ಮಾರಾಟ ಮಾಡುವಾಗ 9 ಮತ್ತು 10 ನೇ ಪ್ರತಿವಾದಿಯರು ಕಾಗದ ಪತ್ರಗಳನ್ನು ಪರೀಶೀಲಿಸಿ ಖರೀದಿ ಮಾಡಿದ್ದಾರೆಂದರೆ ಸುಳ್ಳು. 2004 ರಿಂದ ಇಲ್ಲಿಯವರೆಗೆ 9 ಮತ್ತು 10 ನೇ ಪ್ರತಿವಾದಿಯರು ಸರ್ವೆ ನಂ. 439/1 2 ಎಕರೆ 32 ಗುಂಟೆ ಯಲ್ಲಿ ಮಾಲ್ಕೀ ನಾತೆಯಿಂದ ಕಬ್ಜೆಯಲ್ಲಿದ್ದಾರೆಂದರೆ ಸುಳ್ಳು. 9 ಮತ್ತು 10 ನೇ ಪ್ರತಿವಾದಿಯರು ಸರ್ವೆ ನಂ. 439/1 2 ಎಕರೆ 32 ಗುಂಟೆ ಯಲ್ಲಿ ಸಾಗು ಮಾಡಿ ಬೆಳೆ ಬೆಳೆದು ಅಬಿವೃದ್ಧಿ ಮಾಡಿ ಕಬ್ಜೆಯಲ್ಲಿದ್ದಾರೆಂದರೆ ಸುಳ್ಳು. ಆ ಆಸ್ತಿ ಯಾವ ದಿಕ್ಕಿನಲ್ಲಿದೆ ಎಂದು ಗೊತ್ತಿಲ್ಲ. ಸರ್ವೆ ನಂ. 439/1 ರಲ್ಲಿ ಬಾವಿ ಇದೆ. ಈ ಆಸ್ತಿಯ ದಕ್ಷಿಣ ದಿಕ್ಕಿಗೆ ಇನ್ನೊಂದು ಬಾವಿ ಇದೆ ಎಂದರೆ ಸುಳ್ಳು. 9 ಮತ್ತು 10 ನೇ ಪ್ರತಿವಾದಿಯರಿಗೆ ಆ ಬಾವಿಯಲ್ಲಿ 1/3 ಹಕ್ಕು ಇದೆ ಎಂದರೆ ಸುಳ್ಳು. 9 ಮತ್ತು 10 ನೇ ಪ್ರತಿವಾದಿಯರು ಖರೀದಿ ಪಡೆದ ಆಸ್ತಿ ಸುಮಾರು 35-40 ಲಕ್ಷ ಕಿಮ್ಮತ್ತು ಅಗುತ್ತದೆಂದರೆ ಗೊತ್ತಿಲ್ಲ. 9 ಮತ್ತು 10 ನೇ ಪ್ರತಿವಾದಿಯರು ಖರೀದಿ ಪಡೆದ ಆಸ್ತಿ ಸುಮಾರು 35-40 ಲಕ್ಷ ಕಿಮ್ಮತ್ತು ಆಗುವುದರಿಂದ ನಾವು ಆ ಜಮೀನನ್ನು ಲಪಟಾಯಿಸಲು ಈ ದಾವೆಯಲ್ಲಿ ಪಾಲು ಕೇಳಿದ್ದೇವೆಂದರೆ ಸುಳ್ಳು. 9 ಮತ್ತು 10 ನೇ ಪ್ರತಿವಾದಿಯರು ಮಾಡಿದ ಖರೀದಿ ಧಕ್ಕದ್ದು ಎಂದರೆ ಸುಳ್ಳು. 5-6 ವರ್ಷಗಳ ಹಿಂದೆ 1 ನೇ ಪ್ರತಿವಾದಿ 9 ಮತ್ತು 10 ನೇ ಪ್ರತಿವಾದಿಯರಿಗೆ ಆಸ್ತಿಯನ್ನು ಮಾರಿದ ವಿಷಯ ತಿಳಿಯಿತು. 1

ಮತ್ತು 2 ನೇ ಪ್ರತಿವಾದಿ ಮನೆ ಅಡಚಣೆಗೋಸ್ಕರ ಮತ್ತು ತನ್ನ ಆರೋಗ್ಯ ಸುಧಾರಿಸುವ ಸಲುವಾಗಿ ಆಸ್ತಿಯನ್ನು 9 ಮತ್ತು 10 ನೇ ಪ್ರತಿವಾದಿಯರಿಗೆ ಆಸ್ತಿಯನ್ನು ಮಾರಿದ ವಿಷಯ ನನಗೆ ಗೊತ್ತಿದ್ದರೂ ಸುಳ್ಳು ಹೇಳುತ್ತೇನೆಂದರೆ ಸರಿಯಲ್ಲ. ಮನೆ ಅಡಚಣೆಗೋಸ್ಕರ ಮಾರಿದ ಕಾರಣ ನಮಗೆ ಮತ್ತು 1 ನೇ ಪ್ರತಿವಾದಿಗೆ ಆ ಆಸ್ತಿಯಲ್ಲಿ ಯಾವ ಹಕ್ಕು ಇಲ್ಲ ಎಂದರೆ ಸುಳ್ಳು. 9 ಮತ್ತು 10 ನೇ ಪ್ರತಿವಾದಿಯರಿಗೆ ತೊಂದರೆ ಕೊಡಲು ಸುಳ್ಳು ಹೇಳುತ್ತೇನೆಂದರೆ ಸರಿಯಲ್ಲ.

(ಸಾಕ್ಷಿಯ ಹೇಳಿಕೆಯನ್ನು ತೆರೆದ ನ್ಯಾಯಾಲಯದಲ್ಲಿ ನನ್ನ ಉಖ್ತ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು)

ಈ ಓ ಹೆ ಕೇ ಸರಿ ಇದೆ

ಪ್ರ.ದಿ.&ನ್ಯಾ.ದಂ.ಪ್ರ.ವರ್ಗ, ಗೋಕಾಕ.